# 9

# ವಾಕ್ಯವು ನರಾವತಾರವಾಯಿತು

## (ಯೋಹಾನ 1:1-18)

ಯೇಸುವಿನ ಸ್ವಭಾವ ಹಾಗೂ ಆತನ ಹಾಗೂ ತಂದೆಯಾದ ದೇವರ ಸಂಬಂಧವನ್ನು ಚರ್ಚಿಸುವದಕ್ಕಾಗಿ 318 ಸಭಾನಾಯಕರು, ಕ್ರಿ.ಶ. 325ರಲ್ಲಿ ನಿಸೇನೆ ಅಂದರೆ ಈಶಾನ್ಯ ದಿಕ್ಕಿನಲ್ಲಿರುವ ಈಗಿನ ಟರ್ಕಿಯಲ್ಲಿ ಸೇರಿ ಬಂದಿದ್ದರು. ಯೇಸು ದೇವರಿಂದ ಉಂಟುಮಾಡಲಾದ ಒಂದು ಸೃಷ್ಟಿ ಎಂಬ ಬೋಧನೆಯನ್ನು ಮಾಡಿದ್ದ ಎರಿಯಸ್‌ನ, ಯೇಸುವಿನ ಆರಂಭವಿತ್ತು, ಆತನು ಬದಲಾವಣೆಗೆ ಒಳಪಡುವ ವ್ಯಕ್ತಿ ಎಂಬ ಬೋಧನೆಯ ವಿಚಾರಘೋಷ್ಟಿಗಾಗಿ ಕೂಡಿಬಂದಿದ್ದರು.

ನಿಸೇನೆ ಮಂಡಳಿಯವರು ಅದಕ್ಕೆ ಪ್ರತಿಕ್ರಯಿಸಿದಾಗ ನಿಸೇನೆ "ಮತ ಕ್ರಮ" ಉಂಟಾಯಿತು:

> "ನಾವು ಒಬ್ಬನೇ ದೇವರನ್ನು ನಂಬುತ್ತೇವೆ, ಸಕಲ ರಾಜ್ಯಭಾರದ ತಂದೆ, ಕಾಣುವ ಹಾಗೂ ಕಾಣದಿರುವ ಸಂಗತಿಗಳ ಸೃಷ್ಟಿಕರ್ತನು ಎಂದು ನಂಬುತ್ತೇವೆ;
>
> ಒಬ್ಬನೇ ಕರ್ತನಾದ ಯೇಸು ಕ್ರಿಸ್ತನು, ದೇವರಿಂದ ದೇವರು, ಬೆಳಕಿನಿಂದ ಬೆಳಕು ಸತ್ಯದೇವರಿಂದ ಬಂದ ಸತ್ಯದೇವರು, ಹುಟ್ಟಿದವನು, ಸೃಷ್ಟಿಯಲ್ಲಿ, ಒಬ್ಬನೇ ತಂದೆಯಿಂದ ಬಂದವನು, ಆತನಲ್ಲಿಯೇ ಸಕಲವೂ ಉಂಟಾದವು, ಪರಲೋಕ ಭೂಲೋಕದವುಗಳು ಆತನಿಂದಲೇ ಉಂಟಾದವು, ಆತನು ಮಾನವನಾಗಿ ಬಂದನು, ಬಾಧೆ ಪಟ್ಟು ಮೂರನೆಯ ದಿನ ಎದ್ದನು, ಮತ್ತು ಪರಲೋಕಕ್ಕೆ ಏರಿ ಹೋದನು, ಸತ್ತವರಿಗೂ, ಬದುಕಿರುವವರಿಗೂ ನ್ಯಾಯತೀರಿಸಲು ತಿರಿಗಿ ಬರುವನು ಎಂಬುದನ್ನು ನಂಬುತ್ತೇವೆ.
>
> ಹಾಗೂ (ನಾವುಗಳು) ಪವಿತ್ರಾತ್ಮನನ್ನು ನಂಬುತ್ತೇವೆ.
>
> ಆದರೆ, ಆತನು ಈ ಹಿಂದೆ ಇರಲಿಲ್ಲ, ಅಥವಾ ಜನಾಂಗಗಳಿಗಿಂತ ಮುಂಚೆ ಇದ್ದವನಲ್ಲ. ಆತನು ಬೇರೆ ಮೂಲದಿಂದ ಬಂದವನು, ಅಥವಾ ಆತನು ಬೇರೆಯ ಸೃಷ್ಟಿ, ಬದಲಾವಣೆಗೆ ಒಳಗಾದವನು, ಅಥವಾ ಸ್ಥಬ್ಧನಾಗಿದವನು ಎಂದು ಹೇಳುವವರನ್ನು ಕ್ಯಾಥೋಲಿಕ್ ಹಾಗೂ ಅಪೊಸ್ತಲರ ಸಭೆಗಳು ಖಂಡಿಸುತ್ತವೆ.[1]

ಈ ಮಾನವ ನಿರ್ಮಿತ ಧಾರ್ಮಿಕ ನಂಬಿಕೆಯ ಬೋಧನೆಯಲ್ಲಿ, ಆತನು ತಂದೆಯಿಂದ ಬಂದ ಒಂದು ತುಣುಕು, "ಸತ್ಯದೇವರಿಂದ ಬಂದ ಸತ್ಯದೇವರು," ಹುಟ್ಟಿದವನು, ಸೃಷ್ಟಿಯಲ್ಲ ಎಂದು ಬರೆದಿರುವದನ್ನು ನೋಡುತ್ತೇನೆ. ಅದನ್ನು ವಿರೋಧಿ ಸಿದವರನ್ನು ಆ ಮಂಡಳಿಯವರು ಶಪಿಸಿದರು ಎಂದು ಮುಂದೆ ನೋಡುತ್ತೇವೆ. ನಿಸೇನೆಯ ನಂಬಿಕೆಯ ಕ್ರಮಗಳು ಯೇಸುವಿನ ಗುಣ ಸ್ವಭಾವವನ್ನು ವಿವರಿಸಲು ಸಾಧ್ಯವಾಗದೆ ಹೋದದ್ದರಿಂದ; ಆ ಚರ್ಚೆಗಳು ಈ ದಿನದ ವರೆಗೂ ಮುಂದುವರೆದಿದೆ.

ನಿಸೇನೆ, ಈ ನಂಬಿಕೆಯ ಸೂತ್ರದಲ್ಲಿ, ಬರವಣಿಗೆಕಾರನು ವಾಕ್ಯಕ್ಕನುಗುಣವಾಗಿ ಬರೆದಿರುವದಿಲ್ಲ, "ಹೈಪಾಸ್ಟಾನಿಸ್" ಅಂದರೆ (ಒಂದು "ತುಣುಕು" ಅಥವಾ "ನಿಜ") ಯೇಸುವಿನ ಬಗ್ಗೆ ಅವರು ಏನನ್ನು ನಂಬಿದ್ದರು ಎಂಬ ವಿವರಣೆ.[2] ಹೇಗೂ ಮನುಷ್ಯ ನಿರ್ಮಿತ ಸೂತ್ರಗಳಲ್ಲಿ ಯೇಸುವಿನ ವೈಶಿಷ್ಟ್ಯತೆಯ ಬಗ್ಗೆ ಯಾವುದೇ ಸ್ಪಷ್ಟತೆಯು ಇರುವದಿಲ್ಲ. ಆದರೆ ಯೋಹಾನ

1:1-18ರಲ್ಲಿ ಹಳೆಯ ಪ್ರಶ್ನೆಗೆ ಹಾಗೂ ಯೇಸುವಿನ ಸ್ವಭಾವದ ಕುರಿತು ಸ್ಪಷ್ಟತೆಯನ್ನು ನೀಡಲಾಗಿದೆ. "ಯೇಸು ದೇವರೆ? ಅಥವಾ ಆತನು ದೇವರ ಹಾಗೆ ಇರುವವನೇ?" ಆತನು ದೈವೀಕ ಮನುಷ್ಯನಾಗಿದ್ದು, ದೇವರ ಕೊಂಚವಾದ ಸ್ವಭಾವವನ್ನು ಹೊಂದಿದ್ದನೇ, ಆತನು ಅರ್ಧ ದೇವರು, ಅರ್ಧ ಮನುಷ್ಯನು ಎಂಬ ಪ್ರಶ್ನೆಗಳಿಗೆ ಉತ್ತರವನ್ನು ನೀಡಲಾಗಿದೆ. ಯೇಸುವಿನ ಸ್ವಭಾವದ ಕುರಿತು ಯೋಹಾನ 1:1-18ರಲ್ಲಿ ಯಾವ ವಿವರಣೆ ನೀಡಲಾಗಿದೆ ಎಂದು ಗಮನಿಸೋಣ.

## ಯೇಸು ಪೂರ್ಣ ದೇವರಾಗಿರುವನು

ಹಿಂದಿನ ಮೂರು ಸುವಾರ್ತೆಗಳಿಗಿಂತ ತಡವಾಗಿ, ಯೋಹಾನನು ಯೇಸುವಿನ ಕಥೆಯನ್ನು ತಿಳಿಸುತ್ತಿರುವನು. ಮತ್ತಾಯ ಮತ್ತು ಲೂಕ ಯೇಸುವಿನ ಗರ್ಭಧಾರಣೆಯ ಕುರಿತು ತಿಳಿಸಿರುವರು, ಮಾರ್ಕನು ದೊಡ್ಡವನಾದ ಯೇಸುವಿನ ಬಗ್ಗೆ ಆರಂಭ ಮಾಡಿರುವನು, ಆದರೆ ಯೋಹಾನನು ನಿತ್ಯತ್ವದ ಸಂಗತಿಯನ್ನೇ ತಿಳಿಸಿರುವನು: "ಆದಿಯಲ್ಲಿ ವಾಕ್ಯವಿತ್ತು" ಆದ್ದರಿಂದ ಯೇಸು ಈ ಹಿಂದೆ ಇದ್ದವನು ಎಂಬುದಾಗಿದ್ದು ಆರಂಭದಲ್ಲಿಯೇ, "ಆ ವಾಕ್ಯವು" ಇತ್ತು. ಆದಿಯಲ್ಲಿ ಎಂಬ ಪದವು ನಮ್ಮನ್ನು ಸಹಜವಾಗಿ ಆದಿಕಾಂಡ 1ಕ್ಕೆ ಕರೆದೊಯ್ಯುತ್ತದೆ. ಯೋಹಾನ 1ರ ವ್ಯಾಖ್ಯಾನವನ್ನೇ ಅದು ಹೊಂದಿರುತ್ತದೆ. ಯೇಸುವಿನ ಆರಂಭದಲ್ಲಿ ಏನಾದರೂ ಉದ್ಭವವಾಗುವ ಮೊದಲೇ "ವಾಕ್ಯವಿತ್ತು" ಎಂಬ ಅರ್ಥವಾಗಿದೆ.

ಯೋಹಾನನು ಯೇಸುವನ್ನು "ವಾಕ್ಯ" ಎಂದು ಏಕೆ ಸಂಬೋಧಿಸಿರುವನು? ಈ ಪ್ರಶ್ನೆಗೆ ಉತ್ತರ ನೀಡುವ ಮೊದಲು, ವಚನ 14ರಲ್ಲಿ, ಅವನು ಯೇಸುವಿನ ಕುರಿತಾಗಿ ಮಾತನಾಡುತ್ತಿರುವನು ಎಂಬುದನ್ನು ಗಮನಿಸಬೇಕು: "ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು." ನಂತರ ಆತನ ಚರಿತ್ರೆಯನ್ನು ಮುಂದುವರೆಸಿದನು - ಆದರೆ ಆತನನ್ನು "ವಾಕ್ಯ" ಎಂದು ಏಕೆ ಕರೆದನು? ಯೇಸುವಿನ ಕುರಿತಾಗಿ ಈ ವಿಶೇಷ ಅಂಕಿತನಾಮವನ್ನು ಯೋಹಾನನು ಏಕೆ ಬಳಸಿದನು (ಈ ಯೋಹಾನನೇ ಪ್ರಕಟನೆಯನ್ನು ಬರೆದಿರಬಹುದು ಪ್ರಕಟನೆ 19:13)? ಇದರ ಅರ್ಥವೇನು?

ಮೊದಲನೆಯದಾಗಿ "ವಾಕ್ಯ" ಅಂದರೆ (ಲೋಗೋಸ್) ಯೇಸು ದೇವರ ತಿಳುವಳಿಕೆಯ ತೋರ್ಪಡೆ. ವಾಕ್ಯ ಅಂದರೆ ಒಂದು ಮನಸ್ಸಿನಿಂದ ಹೊರ ಬಂದ ಮತ್ತೊಂದು ಮನಸ್ಸು, ಅದು ಅಲೋಚನೆಯಲ್ಲಿರುವ ಅಥವಾ ಅಖಿತದಲ್ಲಿರುವ ವಾಕ್ಯವಾಗಿರಬಹುದು. ದೇವರ ಮನಸ್ಸನ್ನು ಚಿತ್ತವನ್ನು ತೋರ್ಪಡಿಸುವ ಗುರುತೇ ಯೇಸು. ಇಬ್ರಿಯ 1:1, 2ರಲ್ಲಿ: "ಪುರಾತನ ಕಾಲದಲ್ಲಿ, ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗಭಾಗವಾಗಿಯೂ, ವಿಧವಿಧವಾಗಿಯೂ ಮಾತಾಡಿದ ದೇವರು ಈ ಅಂತ್ಯದಿನಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ ..." (ESV).

ಎರಡನೆಯದಾಗಿ, ಯೇಸುವನ್ನು "ವಾಕ್ಯ" ಎಂದು ಕರೆಯುವದರಲ್ಲಿ, ಆತನು ದೇವರ ಶಕ್ತಿಯ ಅಭಿವ್ಯಕ್ತಿಯಾಗಿರುವನು. ಯೆಶಾಯ 55:8-11ರ ಪ್ರಕಾರ, ನಮ್ಮ ಮಾತಿನಲ್ಲಿರದ ವಿಶಾಷವಾದ ಗುಣಮಟ್ಟವು ಆ ವಾಕ್ಯದಲ್ಲಿರುತ್ತದೆ: ಅದು ಯಾವಾಗಲು ಪರಿಣಾಮಕಾರಿಯಾಗಿದ್ದು, ದೇವರ ಸದುದ್ದೇಶಗಳನ್ನು ಸಾಧಿಸುತ್ತದೆ. ದೇವರು ಹೇಳಿದ್ದೆಲ್ಲವೂ ನೆರವೇರುತ್ತದೆ. ಆದ್ದರಿಂದ ಆದಿಕಾಂಡ 1ರಲ್ಲಿ ದೇವರು ಹೇಳಿದನು ಎಂದು ಪದೇ ಪದೇ ಹೇಳಲಾಗಿದೆ. "ದೇವರು ಹೇಳಿದೆಲ್ಲವೂ ನೆರವೇಲಿತು. ಆತನ ಬಾಯಿ ಮಾತಿನಿಂದಲೇ ಪರಲೋಕವು ಉಂಟಾಯಿತು" (ಕೀರ್ತನೆ 33:6ಎ). ಯೇಸುವಿನ ವ್ಯಕ್ತಿತ್ವದಲ್ಲಿ ದೇವರು ತನ್ನ ಅಲೌಕಿಕವಾದ ಶಕ್ತಿಯನ್ನು ಪ್ರದರ್ಶಿಸಿರುವನು - ಆ ಬಲದಲ್ಲಿ ಶಕ್ತಿ ಮತ್ತು ಪ್ರಭಾವವು ಅಡಗಿರುತ್ತದೆ (4, 5 ವಚನಗಳು). ಪಾಪಿಗಳನ್ನು ತನ್ನ ಮಕ್ಕಳನ್ನಾಗಿ ಮಾಡುವ ಶಕ್ತಿ ಹೊಂದಿರುವನು.

ಆ "ವಾಕ್ಯವು ದೇವರ ಬಳಿಯಲ್ಲಿತ್ತು" ಎಂಬುದರಲ್ಲಿ ಮಗನಾದ ಯೇಸು ಮತ್ತು ತಂದೆಯಾದ ದೇವರನ್ನು ಪ್ರತ್ಯೇಕವಾದ ಗುರುತು ಹಿಡಿಯಲು ಸಾಧ್ಯವಿಲ್ಲ. ಆದರೆ ಪ್ರತ್ಯೇಕವಾದ ವ್ಯಕ್ತಿತ್ವಗಳನ್ನು ಹೊಂದಿರುವವರು. ಇದು ಮುಖ್ಯವಾದ ಅಂಶ: ದೇವರು ಯೇಸುವಿನಲ್ಲಿ ಒಂದು ನಿಗಧಿತವಾದ ಕಾಲಕ್ಕೆ ತನ್ನನ್ನು ತೋರ್ಪಡಿಸಿಕೊಂಡನು ಎಂಬುದಾಗಿರುವದಿಲ್ಲ. ದೇವರು ಒಂದೇ ವ್ಯಕ್ತಿತ್ವದಲ್ಲಿದ್ದು, ಮಗನ ಆಕಾರ ಹಾಗೂ ಪವಿತ್ರಾತ್ಮನ ಆಕಾರದಲ್ಲಿರುವನನ್ನು "ಏಕತ್ವ" ಎನ್ನುವರು. "ಏಕತ್ವ" ತತ್ವದವರು "ಒಬ್ಬ ವ್ಯಕ್ತಿಯಲ್ಲಿ ಮೂರು ವ್ಯಕ್ತಿತ್ವಗಳಿರದೆ, ಒಬ್ಬನೇ ದೇವರು ಇರುವನು" ಎಂದು ಹೇಳಿ, ಗೊಂದಲಕ್ಕೆ ತರೆ ಎಳೆದಿರುವರು. ಇದು ವಾಕ್ಯದ ಹೇಳಿ ಕೆಗೆ ಒತ್ತು ನೀಡುತ್ತದೆ. "ಅದಾಗ್ಯೂ "ಏಕತ್ವ" ತತ್ವವು ಕೆಲವು ವಾಕ್ಯದ ಹೇಳಿಕೆಗಳನ್ನು ಅಲ್ಲಗಳೆಯುತ್ತದೆ. ಉದಾಹರಣೆಗೆ ದೇವರು ತನ್ನ ಮಗನನ್ನು ಲೋಕಕ್ಕೆ ಕಳುಹಿಸಿದನು, ನಂತರ ಯೇಸು ಪವಿತ್ರಾತ್ಮನನ್ನು ತನ್ನ ಶಿಷ್ಯರ ಸಂಗಡ ಇರುವದಕ್ಕಾಗಿ ಕಳುಹಿಸಿದನು ಎಂಬುದಾಗಿದೆ (ಅನೇಕ ನಿದರ್ಶನಗಳಲ್ಲಿ, ಯೋಹಾನ 16:5-11 ನೋಡಿರಿ). ಅದಾಗ್ಯೂ ತಂದೆ, ಮಗ, ಪವಿತ್ರಾತ್ಮ ಮೂರು ವ್ಯಕ್ತಿತ್ವಗಳನ್ನು ಹೊಂದಿದ್ದರೂ, ಒಂದೇ ಎಂಬುದನ್ನು ಅಲ್ಲಗಳೆ ಯುವದು ಅಸಾಧ್ಯ.

ನಂತರದಲ್ಲಿ, "ಆ ವಾಕ್ಯವು ದೇವರಾಗಿತ್ತು" ಎಂದು ಓದುತ್ತೇವೆ. ತಂದೆಯು ದೈವ ವಾಗಿರುವಂತೆ, ಯೇಸು ಸಹ ದೈವವಾಗಿರುವನು, ಅವರಿಬ್ಬರೂ ತುಂಬಾ ನಿಕಟವರ್ತಿಗಳಾ ಗಿರುವದರಿಂದ ಹಳೆಯ ಹಾಗೂ ಹೊಸ ಒಡಂಬಡಿಕೆಯು ಒಬ್ಬನೇ ದೇವರು ಎಂದು ಹೇಳುತ್ತದೆ. ಈ ವಿಚಾರವನ್ನು ಅರ್ಥಮಾಡುವದು ಕಷ್ಟ ಮತ್ತು ಸಕಲ ಗೊಂದಲಕ್ಕೆ ಇದು ಮೂಲಕಾರಣವಾಗಿದೆ. ಹೇಗಿದ್ದರೂ, ಇದೇ ವಿಚಾರವನ್ನು ಯೋಹಾನನ ಸುವಾರ್ತೆಯಲ್ಲಿ ಪುನಃ ಪ್ರತಿಬಿಂಬಿಸಲಾಗಿದೆ. ಯೇಸು ತೋಮನಿಗೆ ಕಾಣಿಸಿದಾಗ ಅವನಿಗೆ ಪುರಾವೆ ದೊರಕದ ಹೊರತು ಆತನ ಪುನರುತ್ಥಾನವನ್ನು ನಂಬುವದಿಲ್ಲ ಎಂದು ಹೇಳಿದ ಸಮಯದಲ್ಲಿ ಉಂಟಾಯಿತು. ಯೇಸು, ತನ್ನ ಪಕ್ಕೆಯಲ್ಲಿ ಕೈ ಹಾಗಿ, ಆತನ ಗಾಯಗಳನ್ನು ಪರಿಶೀಲಿಸು ಎಂದು ಹೇಳಿದಾಗ, ತೋಮನು ಪ್ರತಿಕ್ರಿಯೆ ನೀಡಿ, "ನನ್ನ ಸ್ವಾಮಿ ನನ್ನ ದೇವರೇ" ಅಂದನು (ಯೋಹಾನ 20:28).

ಯೇಸುವು ದೇವರೆಂದು ಪ್ರತಿಪಾದಿಸಲು ಯೋಹಾನ 1ರ ಹೇಳಿಕೆಯಲ್ಲಿ ಲೋಕದ ಸೃಷ್ಟಿಯ ಪಾತ್ರವನ್ನೂ ನೀಡಲಾಗಿದೆ: "ಆತನ ಮೂಲಕವಾಗಿ ಸಮಸ್ತವೂ ಉಂಟಾಯಿತು, ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ" (ವಚನ 3); "ಆತನು ಲೋಕದಲ್ಲಿದ್ದನು; ಮತ್ತು ಲೋಕವು ಆತನ ಮೂಲಕವಾಗಿ ಉಂಟಾಯಿತು. ಆದರೂ ಲೋಕವು ಆತನನ್ನು ಅರಿಯಲಿಲ್ಲ" (ವಚನ 10).

ದೇವರು ಮಾತ್ರ ನಿತ್ಯ ನಿರಂತರವಾಗಿ ಇರುವವನು. ದೇವರು ಮಾತ್ರ ಲೋಕವನ್ನು ಸೃಷ್ಟಿಸಲು ಸಾಧ್ಯ. ದೇವರು ಮಾತ್ರ ಜೀವವನ್ನು ಮತ್ತು ಬೆಳಕನ್ನು ನೀಡುವನು. ಯೇಸುವಿನ ಕುರಿತಾದ ಈ ಎಲ್ಲಾ ಮಾತುಗಳು ಸತ್ಯವಾದವೇ ಎಂದು ಯೋಹಾನನ ಸುವಾರ್ತೆ ತಿಳಿಸುತ್ತದೆ.

## ಯೇಸು ಪೂರ್ಣ ಮನುಷ್ಯನಾಗಿದ್ದನು

ಯೇಸು ಕ್ರಿಸ್ತನು ಈ ಭೂಮಿಗೆ ಬಂದಾಗ, ಯೇಸು ಮನುಷ್ಯ ರೂಪವನ್ನು ಧರಿಸಿದನೆಂದು ಯೋಹಾನ 1:14ಎ ಸ್ಪಷ್ಟಪಡಿಸುತ್ತದೆ: "ಆ ವಾಕ್ಯವೆಂಬುವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಿಸಿದನು." ವಾಕ್ಯವು ಮನುಷ್ಯನಾದನು ಎಂದು ಯೋಹಾನನು ಹೇಳಬಹುದಿತ್ತು ಅಥವಾ ವಾಕ್ಯವು ಮಾನವನಾಯಿತು ಎಂದು ಸಹ ಹೇಳಬಹುದಿತ್ತು. ಆದರೆ ಅವನು ಯೇಸುವಿನ ದೇಹದ ಸ್ವಭಾವವನ್ನು ತಿಳಿಸಿದನು. ಈ ಹೇಳಿಕೆಯ ಮೂಲಕ ಯೋಹಾನನಿಗೆ, ಯೇಸು ನಿಜವಾಗಿ ಮಾನವಾವತಾರ ಪಡಲಿಲ್ಲ ಎಂದು ಹೇಳುತ್ತಿದ್ದ ಜನರಿಂದ

ತೊಂದರೆ ಉಂಟಾದರೆ ಉಂಟಾಯಿತು. ಆ ಜನರನ್ನು "ಡೊಸೆಯಿಸ್ಟ್" ಎನ್ನುತ್ತಿದ್ದರು ಗ್ರೀಕ್‌ನಲ್ಲಿ ("ಡೋಕಿಯಾ"). ಆ ಸಂಗತಿಯು ಕೆಟ್ಟದ್ದು ಹಾಗೂ ಅದರ ಆತ್ಮವು ಒಳ್ಳೇಯದೇ ಎನ್ನುತ್ತಿದ್ದರು. ಆದ್ದರಿಂದ ಯೋಹಾನನು ತನ್ನ ಅಂಶವನ್ನು ವಿಶೇಷವಾಗಿ ಪ್ರದರ್ಶಿಸಿ: "ಆ ವಾಕ್ಯವು ನಾವತಾರ ಎತ್ತಿತ್ತು" ಅಂದನು. ಈ ದೊಸಿಯಿಷ್ಟರನ್ನು ಕುರಿತು ಯೋಹಾನನು ಉದ್ದೇಶವಿಲ್ಲದವನಾಗಿದ್ದರೂ, ಈ ಅಂಶವನ್ನು ಸ್ಪಷ್ಟಪಡಿಸಿದನು.

ವಾಕ್ಯವು "ನರಾವತಾರ ಎತ್ತಿತು" ಎಂಬುದರಲ್ಲಿ, ಮಾನವತ್ವವು ಯೇಸುವಿನ ಸ್ವಭಾವದ ಒಂದು ತುಣುಕು ಆಗಿರುವದಿಲ್ಲ, ಆದರೆ ಆತನು ಲೋಕದಲ್ಲಿರುವಾಗ ಈ ಆಕಾರದಲ್ಲಿ ಕಾಣಿಸಿಕೊಂಡನು. ನಂತರ ಯೋಹಾನನು "ಆತನು ನಮ್ಮ ಸಂಗಡ ಇದ್ದನು" ಎಂದು ಒತ್ತಿಹೇಳಿದನು. "ಸಂಗಡ" ಅಂದರೆ ಗ್ರೀಕ್ ಭಾಷೆಯಲ್ಲಿ ನಮ್ಮಲ್ಲಿ "ಗುಡಾರ ಹಾಕಿದನು." ಸಹಜವಾಗಿ ಗುಡಾರವು ಶಾಶ್ವತವಾದದ್ದಲ್ಲ. ಆತನು ನಮ್ಮೊಂದಿಗೆ ಕೇವಲ ಗುಡಾರಹಾಕಿಕೊಂಡು ಇದ್ದನು ಎಂಬದೇ. ಇದು "ದೇಹದಾರಣೆ" ಎಂಬ ಲ್ಯಾಟೀನ್ ಪದ ಅಕ್ಷರಶಃ ಯೇಸು ಮೂಂಸಧಾರಿಯಾದನು. ಅದರ ಅರ್ಥವೇನೆಂದರೆ ಮಾನವನ ಇರುವಿಕೆಯ ಸಕಲ ಗುಣಗಳನ್ನು ಯೇಸು ಪೂರ್ಣ ಅನುಭವಿಸಿದನು. ಆತನು ನಮ್ಮ ಹಾಗೆ ಹಸಿದನು, ಆಯಾಸಗೊಂಡನು, ಮತ್ತು ನಿದ್ರಿಸಿದನು. ಮಾರ್ಕ 14:33, ಆತನು ಕ್ಷೂಜಿತನಾಗುವ ಮೊದಲು ಬೆರಗಾದನು ಮತ್ತು ಮನಗುಂದಿದವನಾದನು ಎಂಬ ಸೂಚನೆಯನ್ನು ಕಾಣುತ್ತೇವೆ (ಆಂಗ್ಲ ಭಾಷೆಯಲ್ಲಿ ಇರುವದಿಲ್ಲ). ನಮ್ಮ ದೇಹದಲ್ಲಿ ಸತ್ಯವಾಗಿ ರುವ ಸಕಲ ಸಂಗತಿಯನ್ನು ಆತನು ಅನುಭವಿಸಿದನು.

ಅ ದೈವವು ಏಕೆ ಮಾಂಸದಾರಿಯಾಯಿತು? ಯೋಹಾನ 1:18 ಸ್ಪಷ್ಟವಾದ ಉತ್ತರ ನೀಡುತ್ತದೆ: "ದೇವರನ್ನು ಯಾರು ಎಂದು ಕಂಡಿಲ್ಲ; ಯಾವನು ಏಕಪುತ್ರನೂ ಸ್ವತಃ ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು." "ಆತನೇ ತಿಳಿಯಪಡಿಸಿದನು" ಎಂಬುದು ಗ್ರೀಕ್ ಮೂಲವಾಗಿರುತ್ತದೆ. ಕ್ರಿಯಾಪದದಲ್ಲಿ "ಎಕ್ಸೆಗಿಯೋಮೈ" ಅದರ ಇಂಗ್ಲೀಷ್ ಪದ "ಎಕ್ಸೆಗೇಸಿಸ್." ಒಬ್ಬ ಅನುವಾ ದಕನು ದೇವರ ವಾಕ್ಯದ ತರ್ಜುಮೆಯನ್ನು ಮಾಡಿ ಅರ್ಥವನ್ನು ತಿಳಿಸಿದ ಹಾಗೆ. "ಪ್ರಕಟಿಸಿ ವಿವರಿಸು" ಎಂಬದೇ. ಯೇಸುವಿನ ಬರೋಣದಲ್ಲಿ ನಮಗೆ ಈ ಸಂಗತಿಯೇ ದೊರೆಯಿತು. ಆತನು ದೇಹದಾರಿಯಾಗಿ ನಮಗೆ ದೇವರ ಕುರಿತ ವಾದ ಸತ್ಯವನ್ನು ತಿಳಿಸಿದನು. ಇಲ್ಲದೆ ಹೋಗಿದ್ದರೆ ನಾವುಗಳು ದೇವರ ಬಗ್ಗೆ ಅರಿಯುವ ಬೇರೆ ಮಾರ್ಗವೇ ಇರಲಿಲ್ಲ. ಪರಿಮಿತಿಗೊಳಗಾದ ಮಾನವರಾಗಿರುವದರಿಂದ, ಆ ಅಪರಿಮಿತವಾದ ಮಹಿಮೆ ಶಕ್ತಿ, ಹಾಗೂ ದೇವರ ಅನುಪಮವಾದ ಪ್ರೀತಿಯನ್ನು, ಆತನು ಮಾನವನಾಗಿರಬಾರದ ಹೊರತು ಇವುಗಳನ್ನು ಅರಿಯುವ ಸಾಧ್ಯತೆಗಳಿದ್ದವೇ? 1 ಯೋಹಾನ 4:9, 10ರಲ್ಲಿ, "ದೇವರು ತನ್ನ ಒಬ್ಬನೇ ಮಗನನ್ನು ನಾವು ಆತನ ಮೂಲಕ ಜೀವಿಸುವದಕ್ಕಾಗಿ ಲೋಕಕ್ಕೆ ಕಳುಹಿಸಿಕೊಟ್ಟದರಲ್ಲಿಯೇ ದೇವರ ಪ್ರೀತಿಯು ನಮ್ಮಲ್ಲಿ ಪ್ರತ್ಯಕ್ಷವಾಗಿದೆ. ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ, ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದರಲ್ಲಿಯೇ ಪ್ರೀತಿಯ ನಿಜ ಗುಣವು ತೋರಿಬರುತ್ತದೆ." ಹೌದು, ದೇವರು ಯಾವಾಗಲೂ ಪ್ರೀತಿ ಸ್ವರೂಪವೇ: ಆದರೆ ಆತನ ಮಗನಾದ ಯೇಸು ಈ ಲೋಕಕ್ಕೆ ಬಂದು ಶಿಲುಬೆಯ ಮೇಲೆ ಪ್ರಾಣವನ್ನು ನೀಡುವವರೆಗೆ, ಆ ದೇವರ ಆಳವಾದ ಪ್ರೀತಿ ಯನ್ನು ಆತನ ಜನರು ಅರಿಯಲಿಲ್ಲ.

ಫಿಲಿಪ್ಪನು ಸ್ವಾಮಿ, ನಮಗೆ ತಂದೆಯನ್ನು ತೋರಿಸು, ನಮಗೆ ಅಷ್ಟೆ ಸಾಕು ಅಂದನು, ಯೇಸು ಅವನಿಗೆ ಫಿಲಿಪ್ಪನೇ, "ನಾನು ಇಷ್ಟು ದಿವಸ ನಿಮ್ಮ ಸಂಗಡ ಇದ್ದರೂ ನೀನು ಇನ್ನು ನನ್ನನ್ನು ಅರಿತುಕೊಳ್ಳಲಿಲ್ಲವೇ? ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ, ನಮಗೆ ತಂದೆಯನ್ನು ತೋರಿಸೆಂದು ನೀನು ಹೇಳುವದು ಹೇಗೆ ..." (ಯೋಹಾನ 14:8, 9). ಫಿಲಿಪ್ಪನ ಹಾಗೆ, "ಯೇಸುವನ್ನು" ಒಂದು ಆಕಾರವಾಗಿ ನೋಡಬಯಸಿದರೆ ಅಥವ

ಗ್ರಂಥದ ಪುಟಗಳಲ್ಲಿ ನೋಡಬಯಸಿದರೆ, ಬೇರೆ ಯಾವ ಮಾರ್ಗದಿಂದಲೂ ನೋಡಲು ಅಸಾಧ್ಯವಿಲ್ಲ.

ಯೋಹಾನ 1:17ರಲ್ಲಿ, "ಧರ್ಮಶಾಸ್ತ್ರವು ಮೋಶೆಯ ಮುಖಾಂತರ ಕೊಡಲ್ಪಟ್ಟಿತು; ಕೃಪೆಯೂ ಸತ್ಯವೂ ಯೇಸು ಕ್ರಿಸ್ತನ ಮುಖಾಂತರ ಬಂದವು." ಅಂದರೆ ಯೇಸು ಬರುವ ಮುನ್ನ ಕೃಪೆಯೂ, ಸತ್ಯವೂ ಇರಲಿಲ್ಲ ಅಥವಾ ಅದರ ತಿಳುವಳಿಕೆಯೂ ಇರಲಿಲ್ಲ ಎಂಬ ಅರ್ಥವಲ್ಲ. ಹಾಗಿದ್ದರೆ ಅದು ಹಳೆ ಒಡಂಬಡಿಕೆಯ ಗಂಭೀರವಾದ ಅಪಾರ್ಥ ಮತ್ತು ವಿರೂಪವಾಗುತ್ತದೆ. ಸಹಜವಾಗಿ, ಯೇಸು ಬರುವದಕ್ಕೆ ಮೊದಲೇ, ಕೃಪೆಯೂ, ಸತ್ಯವೂ ನೆಲೆಸಿದ್ದವು. ದೇವರು ಇಸ್ರಾಯೇಲ್ಯರೊಂದಿಗೆ ತಾಳ್ಮೆಯಿಂದ ವರ್ತಿಸಿದ ಕಾಯಿದೆ ಇದಕ್ಕೆ ಪುರಾವೆಯಾಗಿದೆ. ಆತನ ತನ್ನ ಸತ್ಯವನ್ನು ತನ್ನ ವಾಕ್ಯದಲ್ಲೂ, "ದಶಾಜ್ಞೆಗಳಲ್ಲೂ" ಮತ್ತು ಪ್ರವಾದಿಗಳ ಮುಖಾಂತರವೂ ಪ್ರಕಟಪಡಿಸಿರುವನು. ಯೇಸು ಬರುವವರೆಗೆ ಕೃಪೆ ಹಾಗೂ ಸತ್ಯತೆಗಳು ಇರಲಿಲ್ಲ ಎಂಬ ತಾತ್ಪರ್ಯವನ್ನು ಯೋಹಾನನು ತಿಳಿಸದೆ, ಆತನು ಬರುವವರೆಗೆ ಅದರ ತಿಳುವಳಿಕೆಯನ್ನು ಅವರು ಹೊಂದಿರಲಿಲ್ಲ ಎಂದು ತಿಳಿಸಿದನು. ಕೀರ್ತನೆ 103:8ರಲ್ಲಿ, "ಕರ್ತನು ಕನಿಕರವೂ ದಯೆಯೂ" ಉಳ್ಳವನು, ಆದರೆ ಯೇಸು ಮಾನವನಾಗಿ ಬರುವವರೆಗೂ, ಆತನ ಕ್ರೂಜೆಯ ಮರಣದವರಿಗೋ ಅದರ ತಿಳುವಳಿಕೆಯು ಉಂಟಾಗಲಿಲ್ಲ.

ಯೋಹಾನ 1:1-18ರಲ್ಲಿ, ಯೇಸುವಿನ ಸ್ವಭಾವದ ಬಗ್ಗೆ ಎರಡು ವಿಧವಾದ ಅಗಮ್ಯ ಹೇಳಿಕೆಗಳನ್ನು ನೀಡಲಾಗಿದೆ. *ಆತನು ಭೂಮಿಯಲ್ಲಿರುವಾಗ ಪೂರ್ಣ ದೇವರೂ, ಪೂರ್ಣ ಮನುಷ್ಯನು ಆಗಿರುವನು.*

## ಪ್ರಮುಖವಾದ ಎರಡು ಪ್ರಶ್ನೆಗಳು

ಯೇಸುವಿನ ಸ್ವಭಾವದ ಎರಡು ಪ್ರಶ್ನೆಗಳನ್ನು ಚರ್ಚಿಸಬೇಕು. ಮೊದಲನೆಯದಾಗಿ (*"ಯೇಸು ಪೂರ್ಣ ದೇವರೂ, ಪೂರ್ಣ ಮನುಷ್ಯನು"* ಎಂಬ) ಈ ಬೋಧನೆಯನ್ನು ಉಳಿದ ವಾಕ್ಯಗಳು ಒಪ್ಪುತ್ತವೆಯೇ? ಪೌಲನು ತನ್ನ ಮೂರು ಪತ್ರಿಕೆಗಳಲ್ಲಿ, ಈ ಪ್ರಶ್ನೆಗಳಿಗೆ ಪ್ರತಿಕ್ರಿಯೆಯನ್ನು ತಿಳಿಸಿರುವನು. ಫಿಲಿಪ್ಪಿಯವರಿಗೆ 2:5-8ರಲ್ಲಿ ಹೀಗೆ ಬರೆಯಲಾಗಿದೆ,

> ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ. ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದು ಮಾಡಿಕೊಂಡು *ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು.* ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು. (ಒತ್ತಿ ಹೇಳಿದ್ದು ನನ್ನದು.)

ಒತ್ತು ನೀಡಿ ಹೇಳಿರುವ ಈ ಪೌಲನ ಮಾತುಗಳು, ಯೋಹಾನರ ಹೇಳಿಕೆಗೆ ಸಮನಾಗಿರುತ್ತದೆ: ಯೇಸು ದೇವರ ಸ್ವರೂಪನಾಗಿದ್ದರೂ ("ವಾಕ್ಯವು ದೇವರಾಗಿತ್ತು") "ಮಾನವ ರೂಪವನ್ನು" ಹೊಂದಿದನು (ಮಾನವ ದೇಹ).

ಅದೇ ವಿಧದಲ್ಲಿ ಕೊಲೊಸ್ಸೆ 1:15-19 ರಲ್ಲಿ ಪೌಲನು,

> ಆತನು ಅದೃಶ್ಯನಾದ ದೇವರ ಪ್ರತಿರೂಪನೂ ಸೃಷ್ಟಿಗೆಲ್ಲಾ ಜ್ಯೇಷ್ಠಪುತ್ರನ ಸ್ಥಾನಹೊಂದಿದವನೂ ಆಗಿದ್ದಾನೆ. ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದವು ಗಳೆಲ್ಲವೂ ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ ಧೊರೆತನಗಳಾಗಲಿ ಅಧಿಕಾರ ಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವು ಆತನ ಮುಖಾಂತರವಾಗಿಯೂ ಆತನಿಗೋಸ್ಕರ ವಾಗಿಯೂ ಸೃಷ್ಟಿಸಲ್ಪಟ್ಟಿತು. ಆತನು ಎಲ್ಲಕ್ಕೂ ಮೊದಲು ಇದ್ದವನು;

> ಆತನು ಸಮಸ್ತಕ್ಕೂ ಆಧಾರ ಭೂತನು. ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು; ಆತನು ಆದಿಸಂಭೂತನು. ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ. ತಂದೆಯಾದ ದೇವರು ಆತನಲ್ಲಿ ತನ್ನ ಸರ್ವ ಸಂಪೂರ್ಣತೆಯು ವಾಸವಾಗಿರಬೇಕೆಂತಲೂ.

ಇದು ಮುಂದೆ ಕೊಲೊಸ್ಸೆ 2:9ಕ್ಕೆ ಒತ್ತು ನೀಡಿರುತ್ತದೆ: "ಕ್ರಿಸ್ತನಲ್ಲಿಯೇ ದೇವರ ಸರ್ವ ಸಂಪೂರ್ತತೆಯು ಅವತರಿಸಿ ವಾಸ ಮಾಡುತ್ತದೆ." ದೇವರ ಸ್ವಭಾವಕ್ಕೆ ಅನುಗುಣವಾಗಿ ಯೇಸುವಿನ ಸ್ವಭಾವವು ಇರುತ್ತದೆ ಎಂಬ ಅರ್ಥ. ಆದ್ದರಿಂದ ಪೌಲನ ಮತ್ತು ಯೋಹಾನನ ಹೋಲಿಕೆಯಂತೆ "ದೇವ ಸರ್ವಸಂಪರ್ಣತೆ" ಹಾಗೂ "ವಾಕ್ಯವು ದೇವರಾಗಿತ್ತು" ಎಂಬುದರ ನಡುವೆ ಸಮಭಾವವಿದೆ. ಕೆಲವರ ಅಭಿಪ್ರಾಯದಂತೆ, ಇದು ನಾಲ್ಕನೆ ಶತಮಾನದ ಏರಿಯಸನ, ಹೇಳಿಕೆಯಂತಿದೆ: ದೇವರು ಯೇಸುವನ್ನು ಪ್ರಥಮವಾಗಿ ಉಂಟುಮಾಡಿದನು ಎಂದು ಹೇಳಿರುವರು (ಸೃಷ್ಟಿಯಲ್ಲಿ ಪ್ರಥಮ) ಆದರೆ ಈ ಹಿನ್ನಲೆಯಲ್ಲಿ, ಇಂಥಾ ಅನುವಾದವು ನಿರರ್ಥಕವಾಗಿದೆ. ದೇವರ ಸಂಪೂರ್ಣತೆಯು ಯೇಸುವಿನಲ್ಲಿ ಇರುವ ಪ್ರಾಯಶಃ ಯೇಸು ಸೃಷ್ಟಿಯಾದವನಲ್ಲ. "ಪ್ರಥಮ ಫಲ" ಅಂದರೆ ಅದು ಕ್ರಮಾಂಕಕ್ಕಿಂತಲೂ, ಆತನಿಗೆ ನೀಡಿರುವ ಅರ್ಥ್ಯತೆ ಹಾಗೂ ಅವಕಾಶಕ್ಕೆ ಒಳಪಡುತ್ತದೆ. ಹಳೆಯ ಒಡಂಬಡಿಕೆಯಲ್ಲಿ, ಚೊಚ್ಚಲಾದದ್ದಕ್ಕೆ ತಂದೆಯಿಂದ ಎರಡುಪಟ್ಟು ಸ್ವಾಸ್ತ್ಯವನ್ನು ನೀಡಿ, ತಂದೆಯ ಮರಣದ ನಂತರ ಅವನಿಗೆ ನಾಯಕತ್ವವನ್ನು ವಹಿಸುತ್ತಿದ್ದನು. ಇದರಲ್ಲಿ ಅವಕಾಶದ ಅಂಶವಿದೆ. ಯೇಸು ಪ್ರಥಮವಾಗಿ ಹುಟ್ಟಿದವನು ಎಂದು ಪೌಲನು ತಿಳಿಸುತ್ತಿರುವದಿಲ್ಲ - ಇಲ್ಲವಾದರೆ ಅವನ ಬರವಣಿಗೆಯಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ.

ಈ ಇದೇ ರೀತಿ ತೀತ 2:11-13:

> ಯಾಕಂದರೆ ಎಲ್ಲಾ ಮನುಷ್ಯರಿಗೆ ರಕ್ಷಣೆಯನ್ನುಂಟುಮಾಡುವ ದೇವರ ಕೃಪೆಯು ಪ್ರತ್ಯಕ್ಷವಾಯಿತು; ನಾವು ಭಕ್ತಿಹೀನತೆಯನ್ನೂ ಲೋಕದ ಆಶೆಗಳನ್ನೂ ವಿಸರ್ಜಿಸಿ ಭಾಗ್ಯಕರವಾದ ನಿರೀಕ್ಷೆಯನ್ನು ಅಂದರೆ ಮಹಾದೇವರ ಮತ್ತು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಇಹಲೋಕದಲ್ಲಿ ಸ್ವಸ್ಥಚಿತ್ತರಾಗಿಯೂ ನೀತಿವಂತರಾಗಿಯೂ ಭಕ್ತಿಯುಳ್ಳವರಾಗಿಯೂ ಬದುಕಬೇಕೆಂದು ಅದು ನಮಗೆ ಬೋಧಿಸುತ್ತದೆ.

ಇಲ್ಲಿ ಪೌಲನು ಯೇಸುವನ್ನು "ದೇವರೆ" ಎಂದು ಸಂಭೋದಿಸಿರುವನು (*ಥಿಯೋಸ್*, ಯೋಹಾನ 1:1 ರಂತೆ). RSV, NRSV ಯು ಟಿಪ್ಪಣಿಯಲ್ಲಿ, ಇದನ್ನು ನ್ಯಾಯಯುತವಾಗಿ ಅನುವಾದ ಮಾಡಲಾಗಿದೆ. ಮಹತ್ವದ ದೇವರು ಹಾಗೂ ನಮ್ಮ ರಕ್ಷಕನು, ಯೇಸುವನ್ನು "ದೇವರೆಂದು" ಕರೆಯದೆ, ದೇವರಿಗೂ ಮತ್ತು ಯೇಸುವಿಗೂ ನಡುವೆ ವ್ಯತ್ಯಾಸವನ್ನು ತೋರಿಸಲಾಗಿದೆ. ಹೇಗೂ ಗ್ರೀಕ್ ಅನುವಾದದಲ್ಲಿ ಈ ರೀತಿ ಇರುವದಿಲ್ಲ. ಅನೇಕ ಇಂಗ್ಲೀಷ್ ಅನುವಾದಗಳು ಮಾತ್ರ ಈ ರೀತಿ ಹೇಳುತ್ತವೆ. ಆದರೆ ಪೌಲನು ಯೋಹಾನನ ಹೇಳಿಕೆಯನ್ನು ಸರಿದೂಗಿಸಲು, ಯೇಸುವನ್ನು "ದೇವರು" ಎಂದಿರುವನು.

ಯೇಸುವಿನ ಸ್ವಭಾವದ ಕುರಿತ ಪೌಲ ಮತ್ತು ಯೋಹಾನರು ಮಾತ್ರ ಬರೆದಿರುವದಿಲ್ಲ. ಇಬ್ರಿಯ 1:3ರಲ್ಲಿ, "ಈತನು ದೇವರ ಪ್ರಭಾವದ ಪ್ರಕಾಶವು ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವು ಅಂದರೆ ದೇವರ ಸಾರೂಪ್ಯದ ಪ್ರತಿ ಎಂಬ ಅರ್ಥವಾಗಿದೆ." ನಂತರದಲ್ಲಿ ಇಬ್ರಿಯರ ಪತ್ರಿಕೆಯಲ್ಲಿ ಮುಂದುವರೆದು ಕೀರ್ತನೆ 45:6, 7, ಹಾಗೂ ಹಳೆಯ ಒಡಂಬಡಿಕೆಯ ಕೆಲವು ವಾಕ್ಯಗಳಲ್ಲಿ ಹೇಳಲ್ಪಟ್ಟಿರುವಂತೆ ಮಗನನ್ನು "ದೇವರು" ಎಂದು ಕರೆಯಲಾಗಿದೆ (1:8). ಯೇಸುವಿನ ಕುರಿತಾದ ದೈವತ್ವ ಹಾಗೂ

ಮನುಷ್ಯತ್ವದ ಯೋಹಾನನ ಹೇಳಿಕೆಯನ್ನು ಹೊಸ ಒಡಂಬಡಿಕೆಯ (7:14), ಉಳಿದ ಪ್ರಕಟನೆಗಳಲ್ಲಿ ಊರ್ಜಿತಗೊಳಿಸಲಾಗಿದೆ.

ಯೋಹಾನನ ಹೇಳಿಕೆಯ ಕುರಿತು, *"ತಂದೆ ಮಗ ಇಬ್ಬರೂ ಒಂದೇ"* ಎಂಬ ತತ್ವವನ್ನು ಹೇಗೆ ನಂಬುವದು? ಎಂಬ ಎರಡನೆಯ ಪ್ರಶ್ನೆ ಇರುತ್ತದೆ. ಸೈದ್ಧಾಂತಿಕವಾಗಿ ಎರಡು ವ್ಯಕ್ತಿತ್ವಗಳು ಒಂದೇ ಆಗಿರಲು ಅಸಾಧ್ಯ - ಹೀಗಿರಲು ತಂದೆಯಾದ ದೇವರು ಹಾಗು ಮಗನಾದ ಯೇಸು ಕ್ರಿಸ್ತನು ಇಬ್ಬರೂ ದೇವರಾಗಿರಲು ಸಾಧ್ಯ? ಇದರೊಂದಿಗೆ ಪವಿತ್ರಾತ್ಮನನ್ನು ಸೇರಿಸುವದಾದರೆ, ಇದರಲ್ಲಿ ಅತಿಯಾದ ಗೊಂದಲ ವಾಗುವ ಸಾಧ್ಯತೆಗಳಿವೆ, ಆದ್ದರಿಂದ ಮೂರು ವ್ಯಕ್ತಿತ್ವಗಳಿದ್ದರೂ, ಒಬ್ಬನೇ ದೇವರನ್ನೂ ಹೊಂದಿದ್ದೇವೆ. ಇದು ನ್ಯಾಯ ಸಮ್ಮತವಾದ ಚಿಂತನೆ, ಇದಕ್ಕೆ ಎರಡು ಪ್ರತಿಕ್ರಿಯೆಗಳನ್ನು ಕಾಣುತ್ತೇವೆ.

1. ಮೊದಲನೆಯದಾಗಿ ಅರ್ಥವಾಗದ ಸಂಗತಿಗಳನ್ನು ನಂಬಬೇಕು. ಇದನ್ನು ನಾವು ಎಲ್ಲಾ ಸಮಯದಲ್ಲೂ ಮಾಡಬೇಕು. ಉದಾಹರಣೆ ವಿಮಾನ ಹಾಗೆ ಹಾರುತ್ತದೆ ಎಂದು ನಾನು ಅರಿತಿರುವದಿಲ್ಲ. ಅದು ಹೇಗೆ ಭಲವಾಗಿ ಹಾರುತ್ತದೆ ಎಂದು ವಿವರಣೆನ್ನು ಪಡೆದಿದ್ದರೂ, ಅದರ ಒಳ ಅರ್ಥವನ್ನು ತಿಳಿದಿರುವದಿಲ್ಲ. ನಾನು 747 ಸಂಖ್ಯೆಯ ದೊಡ್ಡ ವಿಮಾನವನ್ನು ನೋಡು ವಾಗ, ಅದರಲ್ಲಿರುವ ಪ್ರಯಾಣಿಕರ ಭಾರ, ಸರಂಜಾಮುಗಳು, ಹಾಗೂ ಎಣ್ಣೆಯನ್ನು ನೋಡು ವಾಗಲೂ ಅದನ್ನು ಅರ್ಥಮಾಡಿಕೊಳ್ಳಲು ಅಸಾಧ್ಯ ವಾಗಿದೆ. ಇಷ್ಟೆಲ್ಲಾ ಇದ್ದರೂ ಅದರಲ್ಲಿ ನಾನು ಪ್ರಯಾಣ ಮಾಡಿರುವದರಿಂದ ಅದು ಕಾರ್ಯಗತಮಾಡುತ್ತದೆ ಎಂದು ಮನವರಿಕೆ ಮಾಡಿಕೊಂಡಿರುವೆನು. ಅದೇ ರೀತಿಯಲ್ಲಿ ಯೋಹಾನ 3:16ನ್ನು ನಾವು ನಂಬಬೇಕು: "ದೇವರು ಲೋಕದ ಮೇಲೆ ಎಷ್ಟೊ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕಳುಹಿಸಿದನು ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಕಳುಹಿಸಿಕೊಟ್ಟನು." ಇದನ್ನೂ ಸಹ ನಾನು ಅರ್ಥಮಾಡಿಕೊಳ್ಳಲಾರೆ. ಹಾಗೆ ದೇವರು ಪಾಪಿಗಳನ್ನು ಪ್ರೀತಿಸಿ, ತನ್ನ ಒಬ್ಬನೇ ಮಗನನ್ನು ಅವರಿಗಾಗಿ ಕೊಟ್ಟನು? ಪರಿಮಿತಿಗೊಂಡ ಮನುಷ್ಯ ಜ್ಞಾನವು ಇದನ್ನು ಅರಿಯಲಾರದು - ಆದರೆ ಕ್ರೈಸ್ತರಾದ ನಾವು ಇದನ್ನು ನಂಬುತ್ತೇವೆ. ಹೀಗಿರುವಲ್ಲಿ ದೇವರ ಸ್ವಭಾವವನ್ನು ನಾವು ತಿಳಿಯದಾದರೂ, ಏಕೆ ನಂಬಬಾರದು?

2. ದೇವರ ವಿಚಾರವಾಗಿ ನಾವುಗಳು ತಿಳುಕೊಳ್ಳಲು ಅಸಾಧ್ಯವಾದಾಗಲೂ ಅದನ್ನು ಒಪ್ಪಿಕೊಳ್ಳಬೇಕು ಇದು ಎರಡನೆಯ ಪ್ರತಿಕ್ರಿಯೆ. ಈ ವಿಷಯದಲ್ಲಿ ಚಕಿತರಾಗಬಾರದು. ದೇವರ ಕುರಿತು ಯಾವದನ್ನು ಅರಿಯಬೇಕು? ದೇವರ ಕುರಿತಾದ ಅನೇಕ ವಿಚಾರಗಳನ್ನು ನಾವು ಅರಿತಿರುವದಿಲ್ಲ. ಏನೂ ಇಲ್ಲದ್ದರಿಂದ ಆತನು ಈ ಲೋಕವನ್ನು ಹೇಗೆ ಸೃಷ್ಟಿಸಿದನು? ಸಂಗತಿಗಳು ಉಂಟಾಗುವಂತೆ ಆತನು ಹೇಗೆ ಮಾತನಾಡಿದನು? ಬಿಲಿಯಾಂತರ ಜನರಲ್ಲಿ, ಪ್ರತಿಯೊಬ್ಬರನ್ನು ಹೇಗೆ ಅರಿಯುವನು? ನಮ್ಮ ಕೂದಲನ್ನೆಲ್ಲಾ ಆತನು ಲೆಕ್ಕ ಹಾಕಿರುವಾಗ, ಆತನು ನಮ್ಮನ್ನು ಎಷ್ಟೊ ಹೆಚ್ಚಾಗಿ ಅರಿತಿರುವನಲ್ಲವೇ. ಆತನು ನಮಗಾಗಿ ಚಿಂತಿಸುವದು ಒಂದು ಮಹತ್ವದ ರಹಸ್ಯವಲ್ಲವೇ, ಆತನು ನಮಗಾಗಿ ಏಕೆ ಚಿಂತಿಸುತ್ತಾನೆ? ಪಾಪದ ಪ್ರಪಂಚದಲ್ಲಿರುವವರಿಗಾಗಿ, ಆತನು ತನ್ನ ಮಗನನ್ನು ಮರಣಕ್ಕೆ ಒಪ್ಪಿಸಿದನಲ್ಲವೇ, ಅನೇಕರು ಈತನ ಕುರಿತು ಯೋಚಿಸುವದಿಲ್ಲ? ಅದನ್ನು ನಾವು ಅರಿಕೆ ಮಾಡೋಣ: ದೇವರ ಅನೇಕ ವಿಚಾರಗಳನ್ನು ನಾವು ಅರಿಯಲು ಸಾಧ್ಯ.

## ಮುಕ್ತಾಯ

ಯೇಸು ದೇವರಾಗಿದ್ದಾನೆಯೇ? ಹೌದು. ಯೇಸು ಮಾನವನಾಗಿದ್ದನೆಯೇ? ಹೌದು. ಇದನ್ನು ನಾವು ಅರ್ಥಮಾಡಿಕೊಂಡಿದ್ದೇವ್ರೋ? ಇಲ್ಲ, ಅದಾಗ್ಯೂ ನಾವು ನಂಬಬಹುದು ನಮ್ಮ ಆತ್ಮವು ಇದನ್ನು ಅವಲಂಭಿಸಿದೆ! ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು;

ಆ ವಾಕ್ಯವು ದೇವರಾಗಿತ್ತು (ಯೋಹಾನ 1:1). ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು (ಯೋಹಾನ 1:12).

---

ಟಿಪ್ಪಣೆಗಳು

[1]John H. Leith, *Creeds of the Churches* (Atlanta: John Knox, 1973), 30-31.
[2]ವಾಕ್ಯಕ್ಕನುಗುಣವಾದ ಕ್ರೈಸ್ತಕ್ರಮಗಳನ್ನು ವಾಕ್ಯಕ್ಕನುಗುಣವಲ್ಲದ ಭಾಷೆಯಲ್ಲಿ ವಿವರಿಸುವದು ಕಷ್ಟಕರ. (ಅದು ಕೇವಲ ವಾಕ್ಯದ ಪುನರಾವರ್ತನೆ) ಆದ್ದರಿಂದ ಅದು ಚರ್ಚೆಗೆ ಒಳಗಾಗಲೇ ಬೇಕು, ಹಿಂದಿನದನ್ನು ಸ್ಪಷ್ಟಪಡಿಸಲು, ನಂತರದ ಕ್ರಮವನ್ನು ಚರ್ಚಿಸಲಾಗುತ್ತದೆ.

## ಡೋಸೇಸಿಸ್ಟ್ ಮತ್ತು ಗ್ನಾಸ್ಟಿಕ್ಟ್

ಡೋಸಿಸ್ಟ್ ಗುಂಪಿನವರು "ಗ್ನಾಸ್ಟಿಕ್" ಎಂಬ ತತ್ವವನ್ನು ನಂಬಿದವರು (ಗ್ರೀಕ್ "ಗ್ಲೋಸಿಸ್" ಅಂದರೆ "ಜ್ಞಾನ") ಕ್ರೈಸ್ತತ್ವದ ಕುರಿತು ತತ್ವಜ್ಞಾನವನ್ನು ಹೊಂದಿದವರು ಗ್ರೀಕ್ ವರ್ಚಸ್ಸನ್ನೂ ಹೊಂದಿದ್ದರು ಕ್ರಿ.ಶ ಎರಡನೇ ಶತಮಾನದಲ್ಲಿ ಇವರು ಕ್ರೈಸ್ತ ತತ್ವಕ್ಕೆ ವಿರೋಧ ವಾಗಿದ್ದರು.

ಕಾರ್ಯವು ಕೆಟ್ಟದ್ದು ಮತ್ತು ಅಂತರಾತ್ಮವು ಒಳ್ಳೆಯದೇ ಎಂಬ ತತ್ವದವರು. ಗ್ಯಾಸ್ಟಿಸಿಸಮ್ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದಿದ್ದರು. ಕ್ರೈಸ್ತರ ನಂಬಿಕೆಯಿಂದ ಲೋಕವು (ದೇವರ ಸೃಷ್ಟಿ ಎಂಬುದನ್ನು "ಒಳ್ಳೆಯ ದೇವರು" ಅವರು ವಿರೋಧಿಸಿದ್ದರು?) ಮತ್ತು (ಒಳ್ಳೆಯ ದೇವರ ಕೆಟ್ಟದ್ದನ್ನು ಸೃಷ್ಟಿಸಬಹುದೇ?) ಈ ಕ್ರಾಂತಿಯು ಹೆಚ್ಚಾದಾಗ, ಸಭೆಯೊಂದಿಗೆ ಘರ್ಷಣೆ ಹೊಂದಿದರು.

ಕೆಲವರ ಅಭಿಪ್ರಾಯದಂತೆ, ಗ್ನಾಸ್ಟಿಕರ ತತ್ವಕ್ಕೆ ವಿರುದ್ಧವಾಗಿ, ಯೋಹಾನನು 1ನೇ ಅಧ್ಯಾಯವನ್ನು ಬರೆದಿರಬಹುದೇ. ಯಾಕಂದರೆ ಎರಡನೇ ಶತಮಾನದವರೆಗೆ ಗ್ನಾಸ್ಟಿಕರು ವೃದ್ಧಿಗೊಳ್ಳಲಿಲ್ಲ. ಹೇಗೂ. ಇವರ ತತ್ವಕ್ಕೆ ಯೋಹಾನನು ವಿರೋಧವಾಗಿ ಪ್ರತಿಕ್ರಿಯಿಸಿರಬಹುದು. ಹಾಗೂ ಯೋಹಾನನ್ನು "ಗ್ನಾಸ್ಟಿಕರ" ಯೋಹಾನನ ಆಲೋಚನೆಗಳನ್ನೇ ಪಡೆದು ತಮ್ಮ ತತ್ವವನ್ನು ನಿರ್ಮಿಸಿರಬಹುದಲ್ಲವೇ?

1 ಯೋಹಾನ ಗ್ನಾಸ್ಟಿಕರಿಗೆ ವಿರುದ್ಧವಾದ ಪತರವೇ ಆಗಿದೆ.

## ನಾಲ್ಕು ಸುವಾರ್ತೆಗಳ ಅಗತ್ಯವಿದೆಯೇ

ಮತ್ತಾಯ, ಮಾರ್ಕ, ಲೂಕ ಹಾಗೂ ಯೋಹಾನ (ಸುವಾರ್ತೆಗಳು) ಯೇಸುವಿನ ಕಥೆಯನ್ನು ಹೇಳುವದಾದರೂ, ಇವೆಲ್ಲವುಗಳಲ್ಲಿರುವ ಯೇಸುವಿನ ಕಥೆಯನ್ನು ಒಂದು ಮಾಡಿ ಹೇಳುವ ಓದುವ ಆ ನಾಲ್ಕು ಸುವಾರ್ತೆಗಳನ್ನು ಏಕೆ ಸೇರಿಸಲಾಗಿದೆ. ಎರಡನೇ ಶತಮಾನದಲ್ಲಿಯೇ ಈ ಪ್ರಶ್ನೆಯು ಉದ್ಭವಿಸಿತ್ತು.

ಸುವಾರ್ತೆಯ ಪ್ರತಿ ಬರಹಗಾರರೂ ತಮ್ಮದೇ ಆದ ಮುಖ್ಯಾಂಶವನ್ನು ಬರೆದಿರುವರು, ಅವರು ಕಂಡಂತ ನಿರ್ದಿಷ್ಟವಾದ ಅಂಶವನ್ನು ಒತ್ತಿ ಹೇಳಿರುವರು (ಯೋಹಾನ 20:30, 31).

ಅವರಲ್ಲಿ ಒಬ್ಬರೂ ಸಹ ಪೂರ್ಣವಾಗಿ ಹೇಳಿರದೆ, ಯೇಸುವಿನ ಕುರಿತಾದ ಪೂರ್ಣವಾದ ಮಾಹಿತಿಯು ಪೂರ್ಣವಿರುವದಿಲ್ಲ.

ಎರಡನೆಯದಾಗಿ, ಅವುಗಳು ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುತ್ತವೆ. ಹೊಸ

ಒಡಂಬಡಿಕೆಯ "ಕ್ಯಾನನ್"ನನ್ನು ಬರೆಯುವಾಗ (ಪುಸ್ತಕಗಳನ್ನು, ಆತ್ಮ ಪ್ರೇರಿತವಾದವು ಎಂದು ಒಪ್ಪಲಾಗಿದೆ), ಅವುಗಳನ್ನು ಅಪೊಸ್ತಲರು ಒಪ್ಪಿಕೊಂಡು ದೃಢಪಡಿಸಿದ್ದರು. ಮತ್ತಾಯ ಹಾಗೂ ಯೋಹಾನರು ಅಪೊಸ್ತಲರಾಗಿದ್ದರಿಂದ, ಮತ್ತು ಮಾರ್ಕ ಮತ್ತು ಲೂಕರು ಅಪೊಸ್ತಲರಿಗೆ ಸಮೀಪವರ್ತಿಗಳಾಗದ್ದರಿಂದ, ಅವರ ಕೃತಿಗಳನ್ನು ದೇವರ ವಾಕ್ಯದ ಅಧಿಕಾರ ಎಂದು ಒಪ್ಪಿಕೊಳ್ಳಲಾಯಿತು. ಕ್ರೈಸ್ತರು ಸಹ ದೇವರ ವಾಕ್ಯಗಳೆಂದು ಊರ್ಜಿತಮಾಡಿದ್ದರು.

ಮೂರನೆಯದಾಗಿ, ಒಂದು ವೇಳೆ ನಾವುಗಳು ಒಂದೇ ಒಂದು ಸುವಾರ್ತೆಯನ್ನು ಹೊಂದಿದ್ದರೆ, ನಮ್ಮ ತಿಳುವಳಿಕೆಯ ಗುಣಮಟ್ಟ ವೃದ್ಧಿಯಾಗಲು ಸಾಧ್ಯವಿರುತ್ತಿರಲಿಲ್ಲ! ನಾಲ್ಕು ಸುವಾರ್ತೆಗಳು ಯೇಸುವಿನ ನಾಲ್ಕು ಚಿತ್ರಣಗಳನ್ನು ತೋರುತ್ತವೆ, ಅವುಗಳಲ್ಲಿ ಒಂದೂ ಸಹ ಆತನ ಬಗ್ಗೆ ಪೂರ್ಣವಾಗಿ ತಿಳಿಸುವದಿಲ್ಲ, ಪ್ರತಿಯೊಂದು ಸಹ ಆತನ ಗುರುತಿನ ಹಾಗೂ ಸ್ವಭಾವದ ಬಗ್ಗೆ ತಿಳಿಸುತ್ತದೆ. ಉದಾಹರಣೆ ಮತ್ತಾಯನು ಆತನ ಅರಸು ತನದ ಬಗ್ಗೆ ತಿಳಿಸುತ್ತಾನೆ. ಮಾರ್ಕನು ಆತನ ಮಹಾಶಕ್ತಿ ಹಾಗೂ ಅಧಿಕಾರದ ಬಗ್ಗೆ ತಿಳಿಸಿರುವನು. ಯೋಹಾನನು, ಆತನು ದೇವರ ಧೈವೀಕ ಪತ್ರನು, ಆತನ ವಾಕ್ಯವು ಆಗಿದ್ದು ತನ್ನ ಚಿತ್ರದೊಂದಿಗೆ, ತನ್ನ ಸ್ವಭಾವವನ್ನು ತೋರಿಸಿರುವನು ಎಂದಿರುವನು.

ಪ್ರತಿ ಸುವಾರ್ತೆಯಲ್ಲೂ, ಬರಹಗಾರರ ನಿರ್ದಿಷ್ಟವಾದ ದೃಷ್ಟಿಕೋನವನ್ನು ಗ್ರಹಿಸುತ್ತೇವೆ, ಒಂದಕ್ಕಿಂತ ಹೆಚ್ಚಿನ ಸುವಾರ್ತೆಗಾಗಿ ಕೃತಜ್ಞರಾಗುವೆವು.